ದಾವಣಗೆರೆ ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007
ದೂರವಾಣಿ ಸಂಖ್ಯೆ:08192-208029, ಫ್ಯಾಕ್ಸ್:08192-208008
: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮೃತಂ :

ಸಂಖ್ಯೆ:ದಾವಿವಿ/ಶೈ/79/2020-21 | 1786 ದಿನಾಂಕ:05.09.2020

## :ಸುತ್ತೋಲೆ:

**ವಿಷಯ:** 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗಗಳ ಪರೀಕ್ಷಾ ಪೂರ್ವ ತಯಾರಿ ಕುರಿತು ಅನುಸರಿಸಬೇಕಾದ ಅಗತ್ಯ ಮಾರ್ಗಸೂಚಿಗಳ ಬಗ್ಗೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:04.09.2020

******

ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಹಾಗೂ ಸ್ನಾತಕೋತ್ತರ ಕಾಲೇಜುಗಳ/ಅಧ್ಯಯನ ವಿಭಾಗಗಳ ಪ್ರಾಂಶುಪಾಲರು, ಅಧ್ಯಕ್ಷರು ಹಾಗೂ ಸಂಯೋಜನಾಧಿಕಾರಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ - ದಿನಾಂಕ:14.09.2020ರಿಂದ ಪ್ರಾರಂಭವಾಗಲಿರುವ 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಶೈಕ್ಷಣಿಕ/ವೈಯುಕ್ತಿಕ ಹಿತದೃಷ್ಟಿಯಿಂದ ಹಾಗೂ ಕರೋನಾ (ಕೋವಿಡ್-19) ಸಾಂಕ್ರಾಮಿಕ ಕಾಯಿಲೆಯ ವ್ಯಾಪಕ ಹರಡುವಿಕೆಯನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಅನುಸರಿಸಬೇಕಾದ ಈ ಕೆಳಕಂಡ ಅಗತ್ಯ ಮಾರ್ಗಸೂಚಿಗಳನ್ನು ಪಾಲಿಸುವಂತೆ ತಿಳಿಸಲು ನಿರ್ದೇಶಿತರಾಗಿದ್ದೇವೆ.

1. ಪ್ರತಿಯೊಂದು ಕಾಲೇಜು/ಸ್ನಾತಕೋತ್ತರ ಅಧ್ಯಯನ ವಿಭಾಗದಲ್ಲಿ ಒಬ್ಬ ಕೋವಿಡ್ ಶಿಸ್ತುಪಾಲನಾ ಮಾರ್ಗದರ್ಶಿಯನ್ನು ನೇಮಿಸಿ, ಪರೀಕ್ಷಾ ಮೇಲ್ವಿಚಾರಕರೊಡನೆ ಕೋವಿಡ್ ನಿಯಂತ್ರಣದ ಕುರಿತು ಅಗತ್ಯ ಕ್ರಮಗಳ ಪಾಲನೆಯಾಗುವಂತೆ ನೋಡಿಕೊಳ್ಳತಕ್ಕದು.
2. ಕಾಲೇಜು ಅಥವಾ ಪರೀಕ್ಷಾ ಕೇಂದ್ರಗಳ ಮುಖ್ಯದ್ವಾರದಲ್ಲಿ ವಿದ್ಯಾರ್ಥಿಗಳಿಗೆ ಸ್ಯಾನಿಟೈಸರ್ ವ್ಯವಸ್ಥೆಯನ್ನು ಕಡ್ಡಾಯವಾಗಿ ಕಲ್ಪಿಸುವುದು.
3. ಪ್ರತಿಯೊಂದು ಸ್ನಾತಕ ಕಾಲೇಜು ಹಾಗೂ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಪರೀಕ್ಷಾ ಮೇಲ್ವಿಚಾರಕರು ವಿಭಾಗವಾರು ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಪರೀಕ್ಷೆಗೆ ಹಾಜರಾಗುವಂತೆ/ಹಾಸಿನರಾಗುವಂತೆ ಕೊಠಡಿ/ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡತಕ್ಕದ್ದು.
4. ಪ್ರತಿ ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿ ಪ್ರವೇಶ ಪಡೆಯುವ ಒಂದು ತಾಸು ಮೊದಲು ಪರೀಕ್ಷಾ ಆವರಣದಲ್ಲಿ ಹಾಜರಿರತಕ್ಕದ್ದು ಹಾಗೂ ಪ್ರತಿ ವಿದ್ಯಾರ್ಥಿಗೂ ಕಡ್ಡಾಯವಾಗಿ ಪ್ರಾಥಮಿಕ ತಪಾಸಣೆ ಮಾಡಿ ದಿನಾಂಕ ಹಾಗೂ ಸಮಯವನ್ನು ವಹಿಯಲ್ಲಿ ನಮೂದಿಸತಕ್ಕದ್ದು. ಕೋವಿಡ್ ಶಿಸ್ತುಪಾಲನಾ ಮಾರ್ಗದರ್ಶಿಗಳು ಪ್ರತಿಯೊಬ್ಬ ವಿದ್ಯಾರ್ಥಿಗಳ ತಾಪಮಾನ/ದೈಹಿಕ ಆರೋಗ್ಯದ ಇತರೆ ಪ್ರಮುಖ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡತಕ್ಕದ್ದು.
5. ವಿದ್ಯಾರ್ಥಿಗಳು/ಪರೀಕ್ಷಾ ಸಿಬ್ಬಂದಿಗಳು ನೆಗಡಿ, ಕೆಮ್ಮು, ಜ್ವರ, ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದಲ್ಲಿ, ಮುಂಚಿತವಾಗಿ ವಿಭಾಗದ ಅಧ್ಯಕ್ಷರಿಗೆ/ನೊಡೆಲ್ ಅಧಿಕಾರಿಗಳಿಗೆ ತಿಳಿಸುವುದು ಹಾಗೂ ಅವರನ್ನು ಸ್ಥಳೀಯ ಕೋವಿಡ್ ಸೆಲ್/ವೈದ್ಯಾಧಿಕಾರಿಗಳ ಬಳಿ ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡಿಸತಕ್ಕದ್ದು.



Scanned with CamScanner

6. ಪ್ರತಿ ಅಧ್ಯಯನ ವಿಭಾಗದಲ್ಲಿ ಕಡ್ಡಾಯವಾಗಿ ಕೋವಿಡ್-19ರ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿಯೊಂದನ್ನು ಮೀಸಲಿಡುವುದು.
7. ಕಾಲೇಜು ಹಾಗೂ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿದ್ಯಾರ್ಥಿಗಳು ಗುಂಪು ಗುಂಪಾಗಿ ನಿಲ್ಲುವುದು, ಓಡಾಡುವುದು ಹಾಗೂ ಅಭ್ಯಾಸ ಮಾಡದಂತೆ ನಿಗಾ ವಹಿಸುವುದು, ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಸ್ವಯಂ ಸ್ಯಾನಿಟೈಸ್ ವಿಷಯಕ್ಕೆ ಆದ್ಯತೆ ನೀಡುವಂತೆ ಅರಿವು ಮೂಡಿಸುವುದು.
8. ಪ್ರತಿಯೊಂದು ಪರೀಕ್ಷಾ ಕೊಠಡಿಗಳನ್ನು ವೇಳಾಪಟ್ಟಿಗನುಗುಣವಾಗಿ ಪರೀಕ್ಷೆಯು ಮುಗಿದ ನಂತರ ತಪ್ಪದೇ ಸ್ಯಾನಿಟೈಸೇಷನ್ ಮಾಡಿಸತಕ್ಕದ್ದು ಹಾಗೂ ಅಧ್ಯಯನ ವಿಭಾಗಗಳ ಶೌಚಾಲಯ ವ್ಯವಸ್ಥೆಯನ್ನು ಶುಚಿಯಾಗಿಯಾಗಿರುವಂತೆಯೂ ಹಾಗೂ ಸ್ಯಾನಿಟೈಸೇಷನ್ ವ್ಯವಸ್ಥೆಯನ್ನು ಕಲ್ಪಿಸತಕ್ಕದ್ದು.
9. ಪರೀಕ್ಷಾ ಮೇಲ್ವಿಚಾರಕರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ತಮ್ಮ ತಮ್ಮ ಊಟದ ವ್ಯವಸ್ಥೆ/ನೀರಿನ ಬಾಟಲ್ ವ್ಯವಸ್ಥೆಗಳನ್ನು ತಾವೇ ನೋಡಿಕೊಳ್ಳುವಂತೆ ಸೂಚಿಸುವುದು.
10. ಪರೀಕ್ಷಾ ಸಮಯದಲ್ಲಿ ಉಪಯೋಗಿಸುವ ಅಗತ್ಯ ಸಾಮಾಗ್ರಿಗಳನ್ನು ಪರಸ್ಪರ ಹಂಚಿಕೊಳ್ಳದಂತೆ ನಿಗಾ ವಹಿಸುವುದು.

ವಿಶ್ವವಿದ್ಯಾನಿಲಯವು ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿರುವುದರಿಂದ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು/ಅಧ್ಯಾಪಕರು/ಅಧ್ಯಾಪಕೇತರ ಸಿಬ್ಬಂದಿಗಳು/ವಿದ್ಯಾರ್ಥಿಗಳು/ಪೋಷಕರು ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದರ ಜೊತೆಗೆ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಹಕಾರ ನೀಡಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರು (ಪರೀಕ್ಷಾಂಗ)
ಕುಲಸಚಿವರು (ಪರೀಕ್ಷಾಂಗ),
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ-577002

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಇವರಿಗೆ:**
1. ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಸ್ನಾತಕ ಹಾಗೂ ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,
2. ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು/ಸಂಯೋಜನಾಧಿಕಾರಿಗಳಿಗೆ,
3. ನೋಡೆಲ್ ಅಧಿಕಾರಿಗಳು, ಕೋವಿಡ್-19 ಘಟಕ, ದಾವಣಗೆರೆ ವಿಶ್ವವಿದ್ಯಾನಿಲಯ ದಾವಣಗೆರೆ – ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

**ಪ್ರತಿಗಳು:**
1. ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್/ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
3. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
4. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ.
6. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ.
7. ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ಆಪ್ತ ಸಹಾಯಕರು, ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
9. ಉಪಕುಲಸಚಿವರು/ಸಹಾಯಕ ಕುಲಸಚಿವರು, ಶೈಕ್ಷಣಿಕ/ಕಾಲೇಜು ಅಭಿವೃದ್ಧಿ ಪರಿಷತ್ತು ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ
10. ಕಛೇರಿ ಪ್ರತಿ.



Scanned with CamScanner